

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**

ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೪

ದುರ್ಗಾಪೂಜೆಯ ನಂತರ ಕೊಲ್ಕತ್ತಾ ಮತ್ತು ಬಂಗಾಳದ ವಿವಿಧ ಸ್ಥಳಗಳಿಂದ ಭಕ್ತರು ಬಂದು ಶ್ಯಾಮಲಾತಾಲ್‌ನಲ್ಲಿ ನೆರೆದರು. ಕಾಳೀಪೂಜೆ, ಜಗದ್ಧಾತ್ರೀ ಪೂಜೆಯ ದಿನಗಳಲ್ಲಿ ಮಹಾರಾಜರ ಸಮಕ್ಷಮದಲ್ಲಿ ಎರಡು ಗಂಟೆಗಳ ಕಾಲ ಕಾಳೀಕೀರ್ತನೆ ನಡೆದಿತ್ತು. ಆಗ ಕಿಶನ್‌ಪುರದ ಸಾಧುಗಳೂ ಸಹ ಬಂದಿದ್ದರು. ಪೂಜ್ಯ ವಿಜ್ಞಾನಾನಂದ ಮಹಾರಾಜರ ಜಯಂತಿಯಂದು ವಿರಜಾನಂದರು ಅವರ ಪುಣ್ಯಸ್ಮರಣೆಗಳನ್ನು ಹಂಚಿಕೊಂಡರು.

ಪಂಡಿತ ಜವಹರಲಾಲ್ ನೆಹರು ಅವರು ಆಲ್ಮೋರಾ ಜೈಲಿನಿಂದ ಬಿಡುಗಡೆ ಹೊಂದಿ ನಾನಾ ಸ್ಥಳಗಳಲ್ಲಿ ಭಾಷಣಗಳನ್ನು ನೀಡುತ್ತಿದ್ದರು. ನವೆಂಬರ್ ೨೨ರಂದು (೧೯೪೫) ಡೆಹರಾಡೂನಿನ ಪರೇಡ್ ಮೈದಾನದಲ್ಲಿ ನೆರೆದಿದ್ದ ಐವತ್ತು ಸಾವಿರ ಜನರ ಮುಂದೆ ಭಾಷಣ ಮಾಡಿದರು. ವಿರಜಾನಂದರು ಹೋಗುವುದಂತೂ ಸಾಧ್ಯವಿಲ್ಲದ ಮಾತು. ಆದರೆ ಸೇವಕರು ಹೋಗಿ ಬಂದರು. ಅವರಿಂದ ಮಹಾರಾಜರು ಸಭೆಯ ಮಾಹಿತಿಯನ್ನು ಕುತೂಹಲದಿಂದ ಚಾಚೂ ತಪ್ಪದೆ ಕೇಳಿ ತಿಳಿದುಕೊಂಡರು. ಯಶಸ್ವಿ ಪತ್ರಕರ್ತರೂ, ಲೇಖಕರೂ ಆದ ಸಂತ್ ನೇಹಾಲ್ ಸಿಂಗ್ ಎಂಬುವರು ಡೆಹರಾಡೂನಿನಲ್ಲೇ ವಾಸವಾಗಿದ್ದರು. ಅವರು ಆಗಾಗ ಬಂದು ಮಹಾರಾಜರೊಡನೆ ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಇವರು ದಕ್ಷ ಛಾಯಾಚಿತ್ರಕಾರರೂ ಸಹ ಆಗಿದ್ದರು. ಒಂದು ದಿನ ತಮ್ಮ ಕ್ಯಾಮರಾ ತಂದು ವಿರಜಾನಂದರ ಕೆಲವು ಛಾಯಾಚಿತ್ರಗಳನ್ನೂ ಸಹ ತೆಗೆದರು. ಅದರಲ್ಲಿ ಒಂದು ಫೋಟೋ ತುಂಬ ಚೆನ್ನಾಗಿ ಬಂದಿತ್ತು. ಮಹಾರಾಜರು ಅದನ್ನು ತುಂಬ ಇಷ್ಟಪಟ್ಟರು. ಆಚಾರ್ಯ ಯದುನಾಥ ಸರಕಾರರು ಈ ಸಮಯದಲ್ಲಿ ಡೆಹರಾಡೂನಿಗೆ ತಿರುಗಾಡಲು ಬಂದಿದ್ದರು. ಅವರ ಮಗಳೊಬ್ಬಳು ಕೆಲವು ಕಾಲದ ಹಿಂದಷ್ಟೇ ಮಹಾರಾಜರಿಂದ ದೀಕ್ಷೆಯನ್ನು ಪಡೆದಿದ್ದಳು. ಆಚಾರ್ಯರು ಒಂದು ದಿನ ಮಹಾರಾಜರನ್ನು ಭೇಟಿಯಾಗಿ, ಸ್ವಲ್ಪ ಹೊತ್ತು ಮಾತಾಡಿ ಬೀಳ್ಕೊಂಡರು.

ಮಹಾರಾಜರು ಡೆಹರಾಡೂನಿನಲ್ಲಿ ಈ ಬಾರಿ ಐದು ತಿಂಗಳುಗಳನ್ನು ಕಳೆದು, ಡಿಸೆಂಬರಿನ ಎರಡನೇ ವಾರದಲ್ಲಿ ಬೇಲೂರು ಮಠಕ್ಕೆ ತಮ್ಮ ಪ್ರಯಾಣ ಬೆಳೆಸಿದರು. ಮಾರ್ಗದಲ್ಲಿ ಎಲ್ಲಿಯೂ ಇಳಿಯಲಿಲ್ಲ. ಆದರೆ ಸುದೀರ್ಘವಾದ ಪಯಣದಲ್ಲಿ ಅನೇಕ ನಿಲ್ದಾಣಗಳು — ಹರಿದ್ವಾರ, ಮೊರಾದಾಬಾದ್, ಬರೇಲಿ, ಸಾಜಾಹಾನ್‌ಪುರ್, ಲಕ್ನೌ, ಕಾಶೀ, ಪಾಟ್ನಾ, ಜಶಿಡಿ, ಜಾಮ್‌ತಾರಾ, ಅಸಾನ್‌ಸೋಲ್ ಕೊನೆಯದಾಗಿ ವರ್ಧಮಾನ — ಈ ಎಲ್ಲ ಕಡೆಯಲ್ಲಿಯೂ ಸಾಧುಗಳು ಮತ್ತು ಭಕ್ತರು ಅವರ ಬೋಗಿಯಲ್ಲಿ ಹತ್ತು ಹದಿನೈದು ನಿಮಿಷಗಳ ಕಾಲ ಆನಂದವನ್ನು ಯಥೇಚ್ಛವಾಗಿ ಪಡೆದರು. ರಿಸರ್ವ್ ಬೋಗಿಯ ಮುಖ್ಯ ಉದ್ದೇಶ, ಮಹಾರಾಜರ ಶರೀರಕ್ಕೆ ನಿರಂತರ ವಿಶ್ರಾಂತಿ ಸಿಗಲೆಂಬುದು; ಆದರೆ ದಾರಿಯ ಮಧ್ಯಮಧ್ಯದಲ್ಲಿ ಜನರ ಸಮಾಗಮದಿಂದ ಆ ಉದ್ದೇಶ ವಿಫಲವಾಗುತ್ತಿತ್ತು. ಆದರೆ ಇದರಿಂದ ವಿರಜಾನಂದರು ಅಸಂತುಷ್ಟರೇನೂ ಆಗುತ್ತಿರಲಿಲ್ಲ. ''ಆಹಾ! ಎಷ್ಟು ಉತ್ಕಟ ಅಭಿಲಾಷೆ ಹೊತ್ತು ನೋಡಲು ಬರುತ್ತಾರೆ, ನನ್ನ ನಿದ್ದೆಗೆ ಸ್ವಲ್ಪ ಅಡ್ಡಿಯಾದರೆ ತಾನೇ ಏನು?'' ಎಂಬುದು ಅವರ ಮನೋಭಾವವಾಗಿತ್ತು. ಒಂದು ನಿಲ್ದಾಣದಲ್ಲಿ ಶೇಖರವಾದ ಹಾರ, ಹಣ್ಣು, ಸಿಹಿತಿಂಡಿಗಳನ್ನು ಮುಂದಿನ ನಿಲ್ದಾಣದಲ್ಲಿ ಎಲ್ಲರಿಗೂ ವಿತರಿಸಲು ಹೇಳುವರು. ಗಾಡಿ ಇನ್ನೇನು ಹೊರಡುವಾಗ ಪ್ಲಾಟ್‌ಫಾರಂನಲ್ಲಿ 'ಪ್ರಸಾದ'ದಿಂದಾಗಿ ಆನಂದ ಕೋಲಾಹಲವೇಳುವುದನ್ನು ಮಹಾರಾಜರು ಸ್ಮಿತವದನರಾಗಿ ನೋಡುವರು. ನಿಲ್ದಾಣದಲ್ಲಿ ಸ್ವಲ್ಪ ದೂರದಲ್ಲಿ ನಿಂತ ಕೂಲಿಗಳು, ಜಾಡಮಾಲಿಗಳು, ಕುತೂಹಲದಿಂದ ಒಬ್ಬರನ್ನೊಬ್ಬರು ಪ್ರಶ್ನಿಸಿಕೊಳ್ಳುವರು, ''ಕೌನ್ ಹೈ?'' ಮತ್ತೊಬ್ಬ ತುಂಬ ತಿಳಿದವನಂತೆ ತಲೆಯಾಡಿಸಿ ಹೇಳುತ್ತಾನೆ, ''ಸಾಧು ಬಾಬಾ, ಭಾರೀ ಮಹಂತ ಮಹಾರಾಜ್ ಮಾಲೂಮ್'' (ಸಾಧುಗಳು ತುಂಬ ದೊಡ್ಡ ಮಹಂತರು ಎಂದೆನಿಸುತ್ತದೆ). ಅವರುಗಳಿಗೂ ಹಣ್ಣು ಸಿಹಿತಿಂಡಿಯನ್ನು ನೀಡಲಾಗುವುದು. ಖುಷಿಯಿಂದ ಅವರುಗಳ ಕಣ್ಣಲ್ಲಿ ಹೊಳಪು ಮೂಡುವುದು. ದರಿದ್ರ ನಾರಾಯಣನ ಪ್ರಸನ್ನ, ಕಲ್ಯಾಣಮಯ ಆಶೀರ್ವಾದ!

ಬೇಲೂರು ಮಠ ತಲುಪಿದ ಮಹಾರಾಜರು ಕೆಲವು ದಿನಗಳವರೆಗೆ ನಿಯಮಿತವಾಗಿ ತಮ್ಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತ ಬಂದರು. ಆದರೆ ಶೀಘ್ರದಲ್ಲಿಯೇ ಅವರ ಆರೋಗ್ಯ ತೀವ್ರವಾಗಿ ಹದಗೆಡುತ್ತ ಬಂದಿತು. ಡಾಕ್ಟರ್ ಇಂದುಬಾಬುಗಳು ಪೂರ್ಣ ವಿಶ್ರಾಂತಿಯನ್ನು ವಿಧಿಸಿ, ವಾರಕ್ಕೆರಡು ಬಾರಿ ಮಾತ್ರ ಸಾರ್ವಜನಿಕರಿಗೆ ದರ್ಶನ ನೀಡುವ ಅನುಮತಿಯಿತ್ತರು. ಈ ರೀತಿ ಎರಡು ತಿಂಗಳುಗಳು ಕಳೆಯುವಷ್ಟರಲ್ಲಿ ಮಹಾರಾಜರ ಆರೋಗ್ಯ ಸ್ವಲ್ಪ ಸುಧಾರಿಸಿತು. ಆದ್ದರಿಂದ ಭಕ್ತರ ಬೇಡಿಕೆಗಳನ್ನು

ಕೆಲಮಟ್ಟಿಗೆ ಪೂರೈಸಲು ಸಫಲರಾದರು. ಈ ವರ್ಷದ (೧೯೪೬) ಏಪ್ರಿಲ್ ೧೩ರಿಂದ ೧೮ರವರೆಗೆ ಮಠದ ತ್ರೈವಾರ್ಷಿಕ ಸಂನ್ಯಾಸಿ ಸಮ್ಮೇಳನ ಜರುಗಿತು. ವಿರಜಾನಂದರು ಏಪ್ರಿಲ್ ೧೬ರ ಸಾರ್ವಜನಿಕ ಅಧಿವೇಶನದಲ್ಲಿ ಉಪಸ್ಥಿತರಿದ್ದು ನೆರೆದವರಿಗೆಲ್ಲ ಬಟ್ಟೆಯನ್ನು ವಿತರಿಸಿದರು.

ಈ ಬಾರಿಯ ಅಧಿವೇಶನದಲ್ಲಿ ಒಬ್ಬರ ಗೈರುಹಾಜರಿಯನ್ನು ಎಲ್ಲರೂ ತಮ್ಮ ಹೃದಯದಾಳದಲ್ಲಿ ಅನುಭವಿಸಿದರು — ಅವರೇ ಮಠ ಮತ್ತು ಮಿಷನ್ನಿನ ಸಹಕಾರ್ಯದರ್ಶಿಗಳಾದ ಸ್ವಾಮಿ ಅಮೃತೇಶ್ವರಾನಂದಜೀ (ಪರೇಶ್ ಮಹಾರಾಜ್). ಇವರು ಲಾಹೋರಿನಲ್ಲಿ ಮೂರು ವಾರಗಳ ಹಿಂದೆ ಹೃದ್ರೋಗದಿಂದಾಗಿ ಅಕಸ್ಮಾತ್ ತಮ್ಮ ಶರೀರವನ್ನು ತ್ಯಜಿಸಿದ್ದರು (೨೬ನೇ ಮಾರ್ಚ್). ಇವರಿಗೆ ೫೩ ವರ್ಷಗಳಾಗಿತ್ತು. ಅದ್ಭುತ ಕರ್ಮಕುಶಲಿಗಳಾಗಿದ್ದರು, ಇವರಿಗೆ ಸಂಘದ ಬಗ್ಗೆ ಇದ್ದ ಪ್ರೀತ್ಯಾದರಗಳು ಅಚ್ಚರಿಯನ್ನುಂಟುಮಾಡುವಂತಹುದು. ೧೯೧೪ರಲ್ಲಿ ಮಠವನ್ನು ಸೇರಿದ ಪರೇಶಚಂದ್ರ ಚಟ್ಟೋಪಾಧ್ಯಾಯರು ಬ್ರಹ್ಮಚಾರಿ ದೇವಚೈತನ್ಯ ಎಂದು ಪರಿಚಿತರಾದರು. ಸಂನ್ಯಾಸವು ೧೯೨೧ರಲ್ಲಾಯಿತು. ೧೯೨೨ರಲ್ಲಿ ಇವರನ್ನು ಬೇಲೂರು ಮಠದ ಟ್ರಸ್ಟಿಗಳಲ್ಲೊಬ್ಬರನ್ನಾಗಿಯೂ, 'ರಾಮಕೃಷ್ಣ ಮಿಷನ್ ಗವರ್ನಿಂಗ್ ಬಾಡಿ'ಯ ಸದಸ್ಯರನ್ನಾಗಿಯೂ ನೇಮಿಸಲಾಯಿತು. ೧೯೩೬ರಿಂದ ಇವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕೆಲವು ತಿಂಗಳುಗಳ ಹಿಂದೆ ಮಿಷನ್ನಿಗೆ ಸಂಬಂಧಿಸಿದ ಯಾವುದೋ ಒಂದು ಕೆಲಸದ ನಿಮಿತ್ತ ಮುಂಬೈ ರಾಮಕೃಷ್ಣ ಆಶ್ರಮದಲ್ಲಿ ಮೂರು ತಿಂಗಳಿದ್ದರು. ಅಲ್ಲಿಂದ ಕರಾಚಿಗೆ ಹೋಗಿ ನಂತರ ಲಾಹೋರ್ ಆಶ್ರಮಕ್ಕೆ ಹೋದರು. ಅಲ್ಲಿಯೇ ಅತ್ಯಂತ ಅನಿರೀಕ್ಷಿತವಾದ ರೀತಿಯಲ್ಲಿ ಅವರ ದೇಹಾವಸಾನವಾಯಿತು. ಆದರ್ಶದಲ್ಲಿ ಅಗಾಧ ನಿಷ್ಠೆ, ನಿಷ್ಕಲುಷವಾದ ಸಾಧುಶೀಲತೆ ಮತ್ತು ತೀಕ್ಷ್ಣವಾದ ಬುದ್ಧಿಮತ್ತೆಗಾಗಿ ಸ್ವಾಮಿ ಅಮೃತೇಶ್ವರಾನಂದರು ಸಂಘದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದರು. ಅವರ ಇಲ್ಲದಿರುವಿಕೆಯು ತುಂಬಲಾರದ ಶೂನ್ಯತೆಯನ್ನು ಸೃಷ್ಟಿಸಿತ್ತು. ವಿರಜಾನಂದರು ತಮ್ಮ ಭಾಷಣದಲ್ಲಿ ಭಾವಾವೇಗದಿಂದ ಪರೇಶ್ ಮಹಾರಾಜರ ವಿಷಯವನ್ನು ಉಲ್ಲೇಖಿಸಿದರು.

ಈ ಬಾರಿಯ ಗ್ರೀಷ್ಮದಲ್ಲಿ ಹೃದಯದ ದುರ್ಬಲತೆಯನ್ನು ಮನಗಂಡು ಮಹಾರಾಜರಿಗೆ ಪರ್ವತ ಪ್ರದೇಶಕ್ಕೆ ಪ್ರಯಾಣಿಸಲು ವೈದ್ಯರು ಅನುಮತಿ ನೀಡಲಿಲ್ಲ. ಸಮುದ್ರ ತೀರದಲ್ಲಿರುವ ವಾಲ್ಟೇರ್‌ಗೆ (ವಿಶಾಖಪಟ್ಟಣ) ಹೋಗುವುದೆಂದು ನಿಶ್ಚಿತವಾಯಿತು. ಏಪ್ರಿಲ್ ೧೯ರಂದು ವಿರಜಾನಂದರು ತಮ್ಮ ಸಹಚರರೊಂದಿಗೆ ಹೊರಟರು. ನಗರದಿಂದ ದೂರವಾಗಿ, ಸಮುದ್ರದ ತೀರದಲ್ಲಿಯೇ ವಾಲ್ಟೇರಿನ ಆಶ್ರಮವು ನಿಂತಿದೆ. ಅಲ್ಲಿಯ ಕಾರ್ಯದರ್ಶಿಗಳಾದ ನಿಃಶ್ರೇಯಸಾನಂದರು ಮಹಾರಾಜರಿಗೋಸ್ಕರ ಎಲ್ಲ ಪ್ರಕಾರದ ಸುವ್ಯವಸ್ಥೆಯನ್ನು ಮಾಡಿದ್ದರು. ಅಲ್ಲಿಯ ಹೆಸರಾಂತ ವೈದ್ಯರಾದ ಪೆರುರಾಜು ಎಂಬುವವರು ಆಶ್ರಮದ ಅಂತರಂಗ ಭಕ್ತರು. ವಿರಜಾನಂದರು ಇವರ ಚಿಕಿತ್ಸೆಯನ್ನೇ ಪಡೆಯುತ್ತಿದ್ದರು. ಕೊಲ್ಕತ್ತೆಯ ಡಾ. ಇಂದುಬಾಬುಗಳಿಗೆ ಇಲ್ಲಿಂದ ರಿಪೋರ್ಟ್ ಕಳುಹಿಸಲಾಗುತ್ತಿತ್ತು.

ಮಹಾರಾಜರು ವಿಶಾಖಪಟ್ಟಣದಲ್ಲಿರುವ ಅವಕಾಶವನ್ನು ಸದುಪಯೋಗ ಮಾಡಿಕೊಂಡು ದಕ್ಷಿಣ ಭಾರತದ ಸಾಧುಭಕ್ತರು ಆಗಾಗ ಬಂದು ದರ್ಶನ ಮಾಡಿಹೋಗುತ್ತಿದ್ದರು. ೧೯೪೯ರಲ್ಲಿ ವಿರಜಾನಂದರ ಮದ್ರಾಸು ಯಾತ್ರೆಯನ್ನು ಬೆಂಬಲಿಸಿದ್ದ ಶ್ರೀ ರಾಮಾನುಜಾಚಾರಿ (ಮದ್ರಾಸು ಶ್ರೀರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್‌ನ ಸೆಕ್ರೆಟರಿ) ಮತ್ತು ಶ್ರೀ ಅವಿನಾಶಿಲಿಂಗಂ (ಪೆರಿಯನಾಯಕನ್ ಪಾಳೆಯಂ, ಶ್ರೀರಾಮಕೃಷ್ಣ ಮಿಷನ್ ವಿದ್ಯಾಲಯದ ಪರಿಚಾಲಕರು) ಬೇರೆ ಬೇರೆ ಸಮಯಗಳಲ್ಲಿ ಬಂದು ಕೆಲವು ದಿನಗಳಿದ್ದು ಮಹಾರಾಜರ ಸಾನ್ನಿಧ್ಯವನ್ನು ಪಡೆದರು. ಆಗಸ್ಟಿನ ಮಧ್ಯಭಾಗದಲ್ಲಿ ಮಹಾರಾಜರ ಆರೋಗ್ಯವು ಸ್ವಲ್ಪ ಸುಧಾರಿಸುತ್ತಿದ್ದಂತೆಯೇ ಮದ್ರಾಸು, ಸೇಲಂ, ಮೈಸೂರು ಮತ್ತು ಬೆಂಗಳೂರಿನಿಂದ ಹಲವಾರು ಭಕ್ತರು ಬಂದು ಮಂತ್ರದೀಕ್ಷೆಯನ್ನು ಪಡೆದರು.

೧೯೪೬ರ ಆಗಸ್ಟ್ ೧೬ರಂದು ಕೊಲ್ಕತ್ತೆಯಲ್ಲಿ ನಡೆದ ಹತ್ಯಾಕಾಂಡದ ಬಗ್ಗೆ ಪತ್ರಿಕೆಗಳಲ್ಲಿ ಓದಿ ತಿಳಿದ ಮಹಾರಾಜರು ತುಂಬ ವಿಚಲಿತರಾದರು. ಕೆಲದಿನಗಳಾನಂತರ ಬ್ರಹ್ಮಚಾರಿಗಳೊಬ್ಬರು ಕೊಲ್ಕತ್ತೆಯಿಂದ ಅಲ್ಲಿಗೆ ಬಂದರು. ಅವರು ಆ ಹತ್ಯಾಕಾಂಡದ ಪ್ರತ್ಯಕ್ಷ ದರ್ಶಿಗಳಾಗಿದ್ದರು. ಮಾನವ-ಮಾನವರ ನಡುವೆ ನಡೆದ ಪೈಶಾಚಿಕ ಹಿಂಸಾಚಾರಗಳ ದಾರುಣ ವಿವರಣೆಯನ್ನು ಕೇಳಿದ ವಿರಜಾನಂದರು ಸ್ತಂಭಿತರಾದರು. ಸ್ವಾಮಿ ವಿವೇಕಾನಂದರ ಕನಸಾದ ವೇದಾಂತಿಕ ಮಸ್ತಿಷ್ಕ, ಇಸ್ಲಾಮಿಕ ದೇಹದ ಸಮನ್ವಯದ ಭವಿಷ್ಯ ಭಾರತವು ಎಷ್ಟು ದಿನಗಳಲ್ಲಿ ನನಸಾದೀತು? ರಾಜಕೀಯ ಜಟಿಲತೆಯನ್ನು ಕಳೆದು ಭಾರತವು ಯಥಾರ್ಥವಾದ ಕಲ್ಯಾಣವನ್ನು ಎಂದು ತಾನೇ ಕಂಡೀತು?

ಸೆಪ್ಟೆಂಬರಿನಲ್ಲಿ ಮಠಕ್ಕೆ ಮರಳಿದ ವಿರಜಾನಂದರು ಕೊಲ್ಕತ್ತೆಯ ಹತ್ಯಾಕಾಂಡದ ದಾರುಣ ಕಥೆಯನ್ನು ಕೇಳಿದರು. ಜನರ ಮನದಲ್ಲಿ ಇನ್ನೂ ಉದ್ವೇಗ, ಆತಂಕಗಳು ಪೂರ್ಣಪ್ರಮಾಣದಲ್ಲಿದ್ದವು. ಸಂಜೆಯ ನಂತರ ನಗರದಲ್ಲಿ ಕರ್ಫ್ಯೂ ಜಾರಿಯಲ್ಲಿತ್ತು. ತಮ್ಮನಾದ ವಿಜಯಕೃಷ್ಣ ಬಸುವು ತುಂಬ ಅಸ್ವಸ್ಥರಾಗಿದ್ದರು. ಬದುಕುವ ಆಸೆಯನ್ನು ಬಿಟ್ಟುಬಿಟ್ಟಿದ್ದರು ಎಂದೇ ಹೇಳಬಹುದು. ವಿರಜಾನಂದರನ್ನು ಕೊನೆಯದಾಗಿ ಒಮ್ಮೆ ನೋಡುವ ಆಸೆಯನ್ನು ಅವರು ವ್ಯಕ್ತಪಡಿಸಿದ್ದರು. ಆದ್ದರಿಂದ ಸಶಸ್ತ್ರ ಪೋಲೀಸರ ಬಂದೋಬಸ್ತಿನಲ್ಲಿ ಮಹಾರಾಜರು ಒಂದು ಸಂಜೆ ಅವರನ್ನು ನೋಡಿ ಬಂದರು.

ಮುಂಬೈನಿಂದ ಮತ್ತೆ ಆಮಂತ್ರಣ ಬಂದಿದೆ. 'ಶರೀರವು ಚೆನ್ನಾಗಿದ್ದಲ್ಲಿ ಈ ಚಳಿಗಾಲದಲ್ಲಿ ಅಲ್ಲಿಗೆ ಬರುವ ಇಚ್ಛೆಯಿದೆ' ಎಂದು ಮಹಾರಾಜರು ಬರೆದು ತಿಳಿಸಿದರು. ಇನ್ನೇನು ದುರ್ಗಾ ಪೂಜೆ ಹತ್ತಿರದಲ್ಲಿದೆ. ಮಹಾರಾಜರು ಈ ಬಾರಿ ದುರ್ಗಾಪೂಜೆಗೆ ಬೇಲೂರು ಮಠದಲ್ಲೇ ಇರಲಿ ಎಂಬುದೇ ಎಲ್ಲ ಮಠವಾಸಿಗಳ ಬಯಕೆ. ಆದರೆ ಮಹಾರಾಜರು ಇದಕ್ಕೆ ಸಮ್ಮತಿಸಲಿಲ್ಲ. ಡೆಹರಾಡೂನಿನಲ್ಲಿ ಕೆಲವು ತಿಂಗಳು ವಿಶ್ರಾಂತಿಯನ್ನು ಪಡೆದು ಮುಂಬೈಗೆ ಪ್ರಯಾಣಿಸುವ ಅವರ ಸಂಕಲ್ಪವೇ ಆಗ ಪ್ರಬಲವಾಗಿತ್ತು.

ಡೆಹರಾಡೂನಿನಲ್ಲಿರುವಾಗ ನವಾಖಲಿಯ ಹಿಂದೂಗಳ ಮೇಲೆ ನಡೆದ ಅಮಾನುಷ ಅತ್ಯಾಚಾರದ ಸುದ್ದಿಯನ್ನು ತಿಳಿದರು. ಅಸಹಾಯಕರಾದ, ಅಪಮಾನಕ್ಕೀಡಾದ ಹಿಂದೂ ಜನಸಾಮಾನ್ಯರಿಗೆ ಸೇವೆ ನೀಡಲು ರಾಮಕೃಷ್ಣ ಮಿಷನ್ನು ಸಂನ್ಯಾಸಿಗಳ ಒಂದು ತಂಡವನ್ನೇ ಕಳುಹಿಸಿಕೊಟ್ಟಿತ್ತು. ಆ ಸಮಯದಲ್ಲಿ ಬೇರೆಡೆಗಳಲ್ಲೂ ಸೇವಾಕಾರ್ಯವು ನಡೆಯುತ್ತಿತ್ತು; ಹೀಗಾಗಿ ಕಾರ್ಯಕರ್ತರ ಅಭಾವವಿತ್ತು. ವಿರಜಾನಂದರು ತಮ್ಮ ಸೇವಕರೊಬ್ಬರನ್ನು ಈ ಕೆಲಸದಲ್ಲಿ ಪಾಲ್ಗೊಳ್ಳಲು ಮಠಕ್ಕೆ ಕಳುಹಿಸಿಕೊಟ್ಟರು. ಸುಮಾರು ಎರಡು ವರ್ಷಗಳ ಕಾಲ (೧೯೪೬ರ ಅಕ್ಟೋಬರಿನಿಂದ ೧೯೪೮ರ ಡಿಸೆಂಬರವರೆಗೆ) ಶ್ರೀರಾಮಕೃಷ್ಣ ಮಿಷನ್ನು ತ್ರಿಪುರಾ ಮತ್ತು ನವಾಖಾಲೀ ಜಿಲ್ಲೆಯ ಕೋಮುಗಲಭೆಯಿಂದ ಪೀಡಿತರಾದವರಿಗೆ ತನ್ನ ಸೇವಾಕಾರ್ಯವನ್ನು ಮುಂದುವರಿಸಿತ್ತು. ಈ ಸಮಯದಲ್ಲಿ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಮಾಧವಾನಂದರು, ''ಪೂರ್ವ ಬಂಗಾಳದ ಅರಾಜಕತೆ ಬಗ್ಗೆ ರಾಮಕೃಷ್ಣ ಮಿಷನ್ನಿನ ಹೇಳಿಕೆ'' ಎಂಬ ಶೀರ್ಷಿಕೆಯಲ್ಲಿ ವಿಜ್ಞಾಪನೆಯೊಂದನ್ನು ಹೊರಡಿಸಿದ್ದರು. ಅದು ಹೀಗಿತ್ತು :

''ನವಾಖಾಲೀ ಮತ್ತು ತ್ರಿಪುರಾ ಜಿಲ್ಲೆಯಲ್ಲಿ ಒಂದು ಪಂಗಡಕ್ಕೆ ಸೇರಿದ ಸಶಸ್ತ್ರ ಗೂಂಡಾಗಳ ಗುಂಪು ನಡೆಸಿದ ನಾನಾ ವಿಧದ ಪಾಶವೀಕೃತ್ಯಗಳ ಹೃದಯ ವಿದ್ರಾವಕ ಸುದ್ದಿಯನ್ನು ಓದಿ ನಮಗೆಲ್ಲ ಮರ್ಮಾಘಾತವಾಗಿದೆ. ಈ ರೀತಿಯ ವ್ಯಾಪಕವಾದ ಹತ್ಯೆ, ಲೂಟಿ, ದಹನ, ಸ್ತ್ರೀಯ ಅಪಹರಣ, ಬಲಾತ್ಕಾರದ ಮತಾಂತರ ಮತ್ತು ವಿವಾಹ ಮುಂತಾದ ಅನಾಚಾರಗಳು ಇಪ್ಪತ್ತನೆಯ ಶತಮಾನದ ಯಾವುದೇ ಒಂದು ಸಭ್ಯ ಪ್ರತಿಷ್ಠಿತ ಸರ್ಕಾರದ ಕೆಳಗೆ ಅನೇಕ ದಿನಗಳವರೆಗೆ ಅವ್ಯಾಹತವಾಗಿ ನಡೆಯಬಹುದು ಎಂಬುದು ಸತ್ಯವಾಗಿಯೂ ಕಲ್ಪನಾತೀತ. ಆ ಪೈಶಾಚಿಕ ವಿಧ್ವಂಸಕ್ಕೆ ಈಡಾದ ಅಸಹಾಯಕ ಸಂತ್ರಸ್ತರ ಪರವಾಗಿ ನಾವು ಸಂಬಂಧಪಟ್ಟ ರಾಜಕಾರಣಿಗಳಿಗೆ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಈ ನಿಯಮ ಮುರಿಯುತ್ತಿರುವ ದುಷ್ಕರ್ಮಿಗಳಿಗೆ ಅತಿ ಶೀಘ್ರವಾಗಿ ಶಿಕ್ಷೆ ನೀಡಬೇಕು ಮತ್ತು ಅವರ ಸಮಾಜಘಾತಕ ಕಾರ್ಯಗಳನ್ನು ಹತ್ತಿಕ್ಕಬೇಕು ಎಂಬುದು. ಈ ವಿಷಯದಲ್ಲೇನಾದರೂ ವಿಳಂಬ ಮಾಡಿದಲ್ಲಿ ನೀವೆಲ್ಲರೂ ಇದರ ಬಗ್ಗೆ ಉದಾಸೀನರೆಂದೂ, ಅಷ್ಟೇ ಏಕೆ, ಆ ಕಾರ್ಯನಿರ್ವಹಿಸಲು ಇಚ್ಛೆಯಿಲ್ಲದವರೆಂದೂ ಸಹ ತಿಳಿಯಲಾಗುತ್ತದೆ.

''ಸಂತ್ರಸ್ತರಿಗೆ ನಾವು ಯಥಾಶಕ್ತಿ ಸಹಾಯವನ್ನು ಕಳುಹಿಸುತ್ತಿದ್ದೇವೆ. ಅವರೆಲ್ಲರೂ ಯಥಾಶಕ್ತಿ ತಮ್ಮ ಮನೆಮಟ್ಟುಗಳನ್ನು ವಿಶೇಷವಾಗಿ ಸ್ತ್ರೀಯರ ಶೀಲರಕ್ಷಣೆಯನ್ನು ಮಾಡಲು ಪ್ರಯತ್ನಿಸುವರೆಂದು ನಾವು ಆಶಿಸುತ್ತೇವೆ. ಇದೇ ನಮ್ಮ ಧರ್ಮದ ಆದೇಶ. ಸಾಮಾನ್ಯರ ಕರ್ತವ್ಯವು ಮಹಾಪುರುಷರ ಕರ್ತವ್ಯಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ನಿಷ್ಕ್ರಿಯತೆಯನ್ನು ಸಮದರ್ಶಿತ್ವವೆಂದು ತಪ್ಪು ತಿಳಿಯದಿರಲಿ. ಪ್ರಾಚೀನ ಭಾರತದ ಮಹಾಮಹಿಮ ಸ್ಮೃತಿಕಾರನಾದ ಮನುವು 'ಆತ್ಮರಕ್ಷಣೆಗಾಗಿ ಆತತಾಯಿಯನ್ನು ಕೊಲ್ಲಲೂಬಹುದು' ಎಂದು ಹೇಳಿದ್ದಾರೆ. ಹಾಗೆಯೇ ಶ್ರೀಮತ್ ಸ್ವಾಮಿ ವಿವೇಕಾನಂದರು ಮಹಾನಿರ್ವಾಣತಂತ್ರದ 'ಗೃಹಸ್ಥನು ಶತ್ರುವಿನ ಸಮ್ಮುಖದಲ್ಲಿ ವೀರತ್ವವನ್ನು ಆಶ್ರಯಿಸಬೇಕು' ಎಂಬ ಉಕ್ತಿಯನ್ನು ಉದ್ಧರಿಸಿ, ಅದರ ವ್ಯಾಖ್ಯೆ ಮಾಡುತ್ತ, ''ಶತ್ರುಗಳ ಎದುರು ವೀರತ್ವವನ್ನು ಪ್ರದರ್ಶಿಸಿ ಅವರನ್ನು ಶಿಕ್ಷಿಸಬೇಕು. ಇದು ಗೃಹಸ್ಥನ ಕರ್ತವ್ಯ. ಗೃಹಸ್ಥನು ಮನೆಯ ಮೂಲೆಯೊಂದರಲ್ಲಿ ಕುಳಿತು ಅಳುತ್ತ 'ಅಹಿಂಸಾ ಪರಮೋ ಧರ್ಮಃ' ಎಂದು ಬಡಬಡಿಸಿದರೆ ನಡೆಯದು. ಅವನು ಶತ್ರುಗಳ ಮುಂದೆ ಶೌರ್ಯ ಪ್ರದರ್ಶನವನ್ನು ಮಾಡದಿದ್ದರೆ, ತನ್ನ ಕರ್ತವ್ಯವನ್ನು ಅವಹೇಳನ ಮಾಡಿದಂತೆ'' ಎಂದಿದ್ದಾರೆ. (ಕರ್ಮಯೋಗ ೨ನೇ ಅಧ್ಯಾಯ)

''ಎಲ್ಲರೂ ಈ ವಿಷಯವನ್ನು ತಿಳಿದಿರುವುದು ಉಚಿತ. ಯಾರಾದರೂ ಬಲಾತ್ಕಾರಕ್ಕೊಳಗಾಗಿ ಗತ್ಯಂತರವಿಲ್ಲದೆ ಮತಾಂತರವಾದರೂ ಅವರು ಸ್ವಧರ್ಮಕ್ಕೆ ಹಿಂತಿರುಗಲು ಬಯಸಿದಾಗ ಯಾವುದೇ ರೀತಿಯ ಅಡ್ಡಿಯೂ ಅವರಿಗೆ ಇರಲಾರದು. ಧರ್ಮವು ಮನುಷ್ಯನ ಆಂತರಿಕ ವಿಶ್ವಾಸದ ಮೇಲೆ ನಿಂತಿದೆಯೇ ಹೊರತು, ಅದನ್ನು ಜಬರದಸ್ತಿನಿಂದ ಅಳಿಸಲಾಗದು. ಸ್ವಾಮಿ ವಿವೇಕಾನಂದರ ಅನುಯಾಯಿಗಳಾದ ನಮ್ಮ ದೃಢ ವಿಶ್ವಾಸವೇನೆಂದರೆ, ಧರ್ಮದ ಹೆಸರಿನಲ್ಲಿ ಅನುಸರಿಸುತ್ತಿದ್ದ ಕೂಪಮಂಡೂಕತ್ವದ ಚಿಹ್ನೆಗಳಾದ ಅಸ್ಪೃಶ್ಯತೆ, ಸ್ವಮತಕ್ಕೆ ಹಿಂದಿರುಗಲು ಇರುವ ಅಡ್ಡಿ ಮುಂತಾದವನ್ನು ಅಳಿಸಿ ಹಾಕಲು ಇಂದು ಹಿಂದೂ ಸಮಾಜವು ಸಿದ್ಧವಾಗಿದೆ ಎಂಬುದು. ಈಗಿನ ಕಾಲಕ್ಕೆ ಇವು ನಿರರ್ಥಕವಷ್ಟೇ ಅಲ್ಲ; ಯಾವ ಸಮಾಜವು ಹಿಂದೆ ಗ್ರೀಕ್, ಶಕ, ಹೂಣ ಮೊದಲಾದ ವಿಜಾತೀಯ ಧರ್ಮಗಳನ್ನು ಸಹ ತನ್ನಲ್ಲಿ ಮೇಳೈಸಿಕೊಂಡಿತೋ ಅಂತಹ ಸಮಾಜದ ಜೀವಾಳವನ್ನೇ ಕ್ಷೀಣಗೊಳಿಸುತ್ತಲಿದೆ. ಬಲಾತ್ಕಾರವಾಗಿ ಅಪಹೃತರಾದ ಸ್ತ್ರೀಯರನ್ನು ಗೌರವಪೂರ್ವಕವಾಗಿ ಸಮಾಜಕ್ಕೆ ಹಿಂತಿರುಗಿಸಿಕೊಳ್ಳಬೇಕು ಎಂದು ಹೇಳಬೇಕಾಗಿಯೇ ಇಲ್ಲ. ಹಾಗೆ ಮಾಡದಿದ್ದಲ್ಲಿ ಶೋಷಿತರಿಗೆ ಶಿಕ್ಷೆ ಕೊಟ್ಟಂತಾಗುತ್ತದೆ. ಅದು ಯುಕ್ತಿ-ಯುಕ್ತವಾದುದಲ್ಲ.

ಸಮಾಜವು ತನ್ನ ಹೇಡಿತನವೆಂಬ ದೋಷವನ್ನು ಶೋಷಿತ ಸ್ತ್ರೀಯರ ಹೆಗಲಮೇಲೆ ಹೊರಿಸದಿರಲಿ.

''ನೊಂದವರಿಗೆ ನಾವು ಸ್ಪಷ್ಟಪಡಿಸುವುದೇನೆಂದರೆ ಮಾನವ ಕಲ್ಯಾಣವು ಭಗವಂತನ ಕೈಲಿದೆಯೇ ಹೊರತು ಎಷ್ಟೇ ಶಕ್ತಿಶಾಲಿಗಳೆಂದು ತೋರುತ್ತಿದ್ದರೂ ಧರ್ಮಾಂಧ ವ್ಯಕ್ತಿಗಳ ಕೈಲಿಲ್ಲ. ಇದು ನಡೆಯುತ್ತಿರುವ ಮಹಾಯುದ್ಧದಿಂದಲೂ ಪ್ರಮಾಣೀಕರಿಸಲ್ಪಟ್ಟಿದೆ. ಪ್ರಪಂಚದ ಒಂದು ಅಮೋಘವಾದ ಆಧ್ಯಾತ್ಮಿಕ ನಿಯಮವೇನೆಂದರೆ — ಪಾಪವು ತನ್ನ ಆರಂಭದಲ್ಲಿ ಪ್ರಭಾವವನ್ನು ಎಷ್ಟೇ ವಿಸ್ತರಿಸಿದರೂ ಸಹ, ಕೊನೆಗೆ ಅದು ಸಮೂಲವಾಗಿ ನಾಶವಾಗಲೇಬೇಕು. ಭಗವಂತನು ಶೋಷಿತರಿಗೆ ಶಕ್ತಿ, ಬಲವನ್ನೂ ಅತ್ಯಾಚಾರಿಗಳಿಗೆ ವಿಚಾರಬುದ್ಧಿ ಮತ್ತು ಮೈತ್ರೀಭಾವವನ್ನು ನೀಡಲಿ.''

—ಸ್ವಾಮಿ ಮಾಧವಾನಂದ

ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್

### ೨೨ನೇ ಅಕ್ಟೋಬರ್ ೧೯೪೬

ಶ್ರೀರಂಗಂನಲ್ಲಿ ಈ ಬಾರಿ ಭಾವಚಿತ್ರದ ಮುಂದೆ ಕಾಳೀಪೂಜೆಯನ್ನು ನಿರಾಡಂಬರವಾಗಿ ನೆರವೇರಿಸಲಾಯಿತು. ಸ್ವಯಂ ವಿರಜಾನಂದರೇ ನೈವೇದ್ಯ ನೀಡಿದ್ದರು. ತಮ್ಮನಾದ ವಿಜಯಕೃಷ್ಣ ಬಸುವು ನವೆಂಬರ್ ೨೮ರಂದು ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ಪರಲೋಕವಾಸಿಗಳಾದರು ಎಂಬ ವಿಷಯವು ತಿಳಿದು ಬಂತು. ವಿಜಯಕೃಷ್ಣರು ಕೇವಲ ಸಹೋದರನಷ್ಟೇ ಅಲ್ಲ , ಶ್ರೀಮಾತೆಯವರಿಂದ ದೀಕ್ಷೆ ಪಡೆದವರಾದ್ದರಿಂದ ಗುರು ಭ್ರಾತೃವಷ್ಟೇ ಅಲ್ಲದೆ, ಮಠ ಮತ್ತು ಮಿಷನ್ನಿನ ಬಹು ಕೆಲಸಕಾರ್ಯಗಳಲ್ಲಿ ಅವಿಶ್ರಾಂತವಾಗಿ ಸೇವೆ ಸಲ್ಲಿಸಿದ್ದರು.

೧೯೪೭ನೇ ವರ್ಷ ಬಂದುಬಿಟ್ಟಿತು. ಸ್ವಾಮೀಜಿಯವರ ೮೫ನೇ ಜನ್ಮತಿಥಿಯನ್ನು ವಿರಜಾನಂದರು ಕಿಶನ್‌ಪುರದ ಆಶ್ರಮದಲ್ಲಿ ಆಚರಿಸಿದರು. ಡೆಹರಾಡೂನಿನಲ್ಲಿ ಕೆಲವು ತಿಂಗಳಿದ್ದು ಹವಾ ಬದಲಾವಣೆಯ ಪರಿಣಾಮವಾಗಿ ಶರೀರವು ಸ್ವಲ್ಪ ಚೇತರಿಸಿಕೊಂಡಿತ್ತು. ಮುಂಬೈಗೆ ಹೋಗುವುದೆಂದು ನಿಶ್ಚಯಿಸಿದರು. ಜನವರಿ ೧೭ರಂದು, ಏಕಾದಶಿಯ ದಿನ ಶ್ರೀರಂಗಂನಲ್ಲಿ ಸುಮಾರು ಎರಡೂವರೆ ಗಂಟೆಗಳ ಕಾಲದ ಭಜನೆ, ರಾಮನಾಮ ಸಂಕೀರ್ತನೆಯು ಏರ್ಪಾಡಾಗಿತ್ತು. ಅಲ್ಲಿನ ಭಕ್ತರು ಮತ್ತು ಕೆಲವು ವಿಶೇಷ ವ್ಯಕ್ತಿಗಳು ಸಹ ಆಮಂತ್ರಿರಾಗಿದ್ದರು. ಮಹಾರಾಜರ ಉಪಸ್ಥಿತಿಯಲ್ಲಿ ನಡೆದ ಸಾಧುಗಳ ಈ ರಾಮನಾಮ ಸಂಕೀರ್ತನೆಯನ್ನು ನೆರೆದವರೆಲ್ಲರೂ ತುಂಬ ಆಸ್ವಾದಿಸಿದರು. ಸಂಕೀರ್ತನೆಯು ಮುಗಿಯುತ್ತಿದ್ದಂತೆ ಮಹಾರಾಜರು 'ಯಾವ ಫಲ ಬೇಕು ನನಗೆ...'[೧] ಎಂಬ ಹಾಡನ್ನು ಹಾಡಲು ಹೇಳಿ, ಅದನ್ನು ತುಂಬ ಏಕಾಗ್ರಚಿತ್ತದಿಂದ ಆಲಿಸಿದರು. ಮಹಾರಾಜರ ಆದೇಶದಂತೆ ನೆರೆದವರಿಗೆಲ್ಲರಿಗೂ ಹಣ್ಣು , ಸಿಹಿತಿಂಡಿಯನ್ನು ಹಂಚಲಾಯಿತು.

ಮುಂಬೈಗೆ ಹೋಗುವ ಮಾರ್ಗವಾಗಿ ದೆಹಲಿಯಲ್ಲಿ ಮಹಾರಾಜರು ಒಂದು ದಿನ ತಂಗಿದ್ದರು. ಅಂದು ಪೂಜ್ಯ ಬ್ರಹ್ಮಾನಂದರ ಜನ್ಮದಿನ. ಸಂಜೆ ರಾಮನಾಮ ಸಂಕೀರ್ತನೆಯು ಜೋರಾಗಿ ನಡೆಯಿತು. ಮಹಾರಾಜರು ತುಂಬ ಆನಂದಿಸಿದರು. ಇದೇ ದೆಹಲಿಗೆ ಮಹಾರಾಜರ ಕೊನೆಯ ಭೇಟಿಯಾಯಿತು. ಜನವರಿ ೨೬ರಂದು (೧೯೪೭) ಫ್ರಾಂಟಿಯರ್ ಮೇಲ್‌ನಲ್ಲಿ ಅವರು ಮುಂಬೈ ತಲುಪಿದರು.

*(ಮುಂದುವರಿಯುವುದು)*

---

೧ ಯಾವ ಫಲ ಬೇಕು ಎನಗೆ । ಜನ್ಮ ಸಫಲವ ಗೈವ ಫಲವಿರಲು ಸುಮ್ಮಗೆ ॥
ಮೋಕ್ಷ ಫಲಗಳ ಬಿಡುವ ಶ್ರೀರಾಮತರುವಿಹುದು ನನ್ನ ಎದೆಯೊಳಗೆ॥
ಶ್ರೀರಾಮ ಕಲ್ಪತರು ಮೂಲದಲಿ ನಾ ಕುಳಿತು
ಬೇಕಾದ ಫಲಗಳನು ಪಡೆಯುತಿರುವೆ
ಪ್ರತಿಫಲವ ನಾ ಬಯಸೆ ಜಗದ ಕಹಿ ಫಲಗಳನು
ನಿಮ್ಮೊಂದಿಗೆ ಬಿಟ್ಟು ಮುನ್ನಡೆಯುವೆ ॥

## ತ್ರಿವೇಣೀ ದರ್ಶನ

ಅಲಹಾಬಾದಿನಲ್ಲಿನ ಮೊದಲ ದಿನಗಳಲ್ಲಿ ವಿಜ್ಞಾನಾನಂದರು ನಿತ್ಯವೂ ತ್ರಿವೇಣಿಗೆ ಸೂರ್ಯೋದಯದ ಹೊತ್ತಿಗೆ ಸ್ನಾನಕ್ಕೆ ಹೋಗುತ್ತಿದ್ದರು. ಒಂದು ದಿನ ಸ್ನಾನಮಾಡಿ ಗಂಗಾಸ್ತೋತ್ರವೊಂದನ್ನು ಹೇಳಿಕೊಳ್ಳುತ್ತಿರುವಾಗ, ವಿಜ್ಞಾನಾನಂದರಿಗೆ ಒಂದು ದರ್ಶನವಾಯಿತು. ತಾಯಿ ತ್ರಿವೇಣೀ ದೇವಿಯು ಮೂರು ಜಡೆಗಳುಳ್ಳ ಸುಂದರಿಯಾದ ಚಿಕ್ಕ ಹುಡುಗಿಯಾಗಿ ಕಾಣಿಸಿಕೊಂಡು, ಮತ್ತೆ ನೀರಿನಲ್ಲಿ ಅದೃಶ್ಯಳಾದಳು. ಅವರ ಮನಸ್ಸೆಲ್ಲವೂ ಆ ದರ್ಶನದಿಂದಲೇ ತುಂಬಿಹೋಯಿತು. ಸ್ತೋತ್ರಪಠಣವಾದಮೇಲೆ ಆಶ್ರಮಕ್ಕೆ ಹಿಂದಿರುಗುವಾಗ, ಮತ್ತೊಮ್ಮೆ ತಾಯಿ ತ್ರಿವೇಣಿ ತನ್ನ ಮೂರು ಜಡೆಗಳನ್ನು ಕುಣಿಸಿಕೊಳ್ಳುತ್ತ ಅದೇ ದಿಕ್ಕಿನಲ್ಲಿ ನಡೆಯುತ್ತಿರುವಂತೆ ಕಾಣಿಸಿತು. ಸ್ವಲ್ಪ ಹೊತ್ತಾದ ಮೇಲೆ ಅವಳು ಅದೃಶ್ಯಳಾದಳು. ಈ ದರ್ಶನದ ವಿಚಾರ ತಿಳಿದ ಬ್ರಹ್ಮಾನಂದರು ಅದನ್ನು ನಿಜವಾದದ್ದೆಂದು ಖಚಿತಪಡಿಸಿದರು. ವಿಜ್ಞಾನಾನಂದರೇ ಆ ನಂತರ ಹೇಳಿದರು: ''ದರ್ಶನವು ಮನಸ್ಸಿನಲ್ಲಿ ಶಾಶ್ವತವಾದ ಆಧ್ಯಾತ್ಮಿಕ ಆನಂದವನ್ನೂ ಜಾಗೃತಿಯನ್ನೂ ಉಂಟುಮಾಡುವುದೇ ಅದು ನಿಜವೆಂಬುದಕ್ಕೆ ಸಾಕ್ಷಿ. ಜಗನ್ಮಾತೆಯ ಆ ಕನ್ಯಾರೂಪವನ್ನು ಕುರಿತು ಯೋಚಿಸಿದಾಗ ನನಗೆ ಈಗಲೂ ಆನಂದವಾಗುತ್ತದೆ.''

*(**ದೇವರೊಡನೆ ಬಾಳಿದವರು,** ಸ್ವಾಮಿ ಚೇತನಾನಂದ, ಸಂಪುಟ ೧, ಪು. ೭೦೪-೫)*